# ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಪ್ಯಾಕ್ ಹೌಸ್ ಮಾರ್ಗ

ತೋಟಗಾರಿಕೆ ಉತ್ಪನ್ನಗಳ ದಾಸ್ತಾನು, ಸಂಗ್ರಹಣೆ (ಮಾರಾಟ ಮಾಡುವವರೆಗೆ) ಅವಶ್ಯಕತೆಗೆ ಪ್ಯಾಕಿಂಗ್ ಮತ್ತು ಗ್ರೇಡಿಂಗ್ ಮಾಡಲು ನಿರ್ಮಿಸುವ ಕ್ರಿಯಾತ್ಮಕ ಪ್ಯಾಕ್ ಹೌಸ್ ಘಟಕದ ಅಳತೆಯು 9 ಮೀಟರ್ ಉದ್ದ, 6 ಮೀಟರ್ ಅಗಲ, ಕನಿಷ್ಠ 3 ಮೀಟರ್ ಎತ್ತರ ಒಟ್ಟು 54 ಚ.ಮೀ. (ಕನಿಷ್ಟ ಶೇಖರಣಾ ಸಾಮರ್ಥ್ಯ) ವಿಸ್ತೀರ್ಣ ವಿರುವ ಪ್ರತಿ ಘಟಕಕ್ಕೆ ರೂ. 4.00 ಲಕ್ಷಗಳವರೆಗೆ ಯೋಜನಾ ಪ್ರಸ್ತಾವನೆ ವೆಚ್ಚವು ಇದ್ದು, ಇದರಲ್ಲಿ ಶೇ.50% ರಂತೆ ಗರಿಷ್ಟ ರೂ. 2.00 ಲಕ್ಷದವರೆಗೆ ಸಹಾಯಧನ ನೀಡಲು ಅವಕಾಶವಿರುತ್ತದೆ.

ಕಾರ್ಯಕ್ರಮದ ಉದ್ದೇಶ:

1. ತೋಟಗಾರಿಕೆ ಬೆಳೆಗಳ ಕಟಾವಿನ ನಂತರ ಹಾಳಾಗದಂತೆ ಕ್ಷೇತ್ರ ಮಟ್ಟದಲ್ಲಿ ಸಂರಕ್ಷಿಸಲು, ದಾಸ್ತಾನು ಮಾಡಲು ಪ್ಯಾಕ್ ಹೌಸ್ ಗಳನ್ನು ನಿರ್ಮಿಸುವುದು ಅವಶ್ಯಕವಾಗಿರುತ್ತದೆ.
2. ತೋಟಗಾರಿಕೆ ಬೆಳೆಗಳನ್ನು ಕೊಯ್ಲಿನ ನಂತರ ತೋಟಗಾರಿಕೆ ಉತ್ಪನ್ನಗಳನ್ನು ಆಂತರಿಕ ಮಾರಾಟ ಮತ್ತು ರಫ್ತು ಮಾಡುವ ಸಲುವಾಗಿ ವೈಜ್ಞಾನಿಕವಾಗಿ ವಿಂಗಡಿಸಿ ಅಗತ್ಯತೆಗೆ ತಕ್ಕಂತೆ ವಿವಿಧ ರೀತಿಯ ಕಂಟೈನರ್ ಗಳಲ್ಲಿ ಪ್ಯಾಕ್ ಮಾಡಿ ಉತ್ತಮ ರೀತಿಯಲ್ಲಿ ಮಾರಾಟ ಮಾಡಲು ರೈತರಿಗೆ ಅನುಕೂಲ ಮಾಡಿಕೊಡುವುದು.
3. ಪ್ಯಾಕ್ ಹೌಸ್ ನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಬಗ್ಗೆ ರೈತರಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

ತಾಂತ್ರಿಕ ವೈಶಿಷ್ಟತೆಗಳು:

1. ಕ್ರಿಯಾತ್ಮಕ ಪ್ಯಾಕ್ ಹೌಸ್ ಅಳತೆಯು 9 ಮೀಟರ್ ಉದ್ದ, 6 ಮೀಟರ್ ಅಗಲ, ಕನಿಷ್ಟ 3 ಮೀಟರ್ ಎತ್ತರ (ಕಟ್ಟಡ ಒಟ್ಟು 54 ಚ.ಮೀ. ವಿಸ್ತೀರ್ಣ) ಹೊಂದಿರಬೇಕು. ಕಟ್ಟಡದ ವಿನ್ಯಾಸ ಮಾದರಿ ಅನುಬಂಧಿಸಿದೆ.
2. ಕಟ್ಟಡದ ಮೇಲ್ಚಾವಣಿ ಮುಂಬಾಗವು 15 ಅಡಿಗಳವರೆಗೆ ಚಾಚಿಕೊಳ್ಳುವಂತೆ ಇರಬೇಕು, ಇದರಿಂದ ಕೊಯ್ಲಿ ನಂತರ ಉತ್ಪನ್ನಗಳನ್ನು ನೆರಳಿನಲ್ಲಿ ಶೇಖರಿಸಿ ಇಡುವುದರಿಂದ ಉತ್ಪನ್ನಗಳ ತಪಮಾನ ಕಡಿಮೆಗೊಳಿಸಬಹುದಾಗಿರುತ್ತದೆ.
3. ನಿಗದಿಪಡಿಸಿದ ಮಾದರಿ ನಕ್ಷೆಯಂತೆ ಪ್ಯಾಕ್ ಹೌಸ್ ಘಟಕ ನಿರ್ಮಾಣ ಮಾಡುವುದು ಕಡ್ಡಾಯವಾಗಿರುತ್ತದೆ.
4. ಪ್ಯಾಕ್ ಹೌಸ್ ಛಾವಣಿ ಹಾಗೂ ಕಟ್ಟಡದ ಮೇಲ್ಚಾವಣಿ ಮುಂಭಾಗವನ್ನು RCC/ಹೆಂಚು/Abestors Sheet ಅಥವಾ ಇತರ ರೀತಿಯಿಂದ ನಿರ್ಮಾಣ ಮಾಡಿರಬಹುದು. ಒಳಭಾಗದಲ್ಲಿ ವಿದ್ಯುತ್ ದೀಪಗಳ ಸೌಕರ್ಯ ಇರಬೇಕು.
5. ಪ್ಯಾಕ್ ಹೌಸ್ ಕಟ್ಟಡದ ಎರಡು ಬದಿಗೂ 3 ಅಡಿ ಎತ್ತರ ಹಾಗೂ 5 ಅಡಿ ಅಗಲದ ಕಿಟಕಿ ಹಾಗೂ 6 ಅಡಿ ಎತ್ತರ ಹಾಗೂ 4 ಅಡಿ ಅಗಲದ ಬಾಗಿಲು ಅಳವಡಿಸಿರಬೇಕು. ಇದರಿಂದ ಉತ್ತಮವಾದ ಗಾಳಿ ಮತ್ತು ಬೆಳಕು ಕಲ್ಪಿಸಬಹುದಾಗಿರುತ್ತದೆ.
6. ಪ್ಯಾಕ್ ಹೌಸ್ ಸದ್ಬಳಕೆಗೆ ಪೂರಕವಾಗಿ ಬೇಕಾಗುವ ತೂಕದ ಯಂತ್ರ (ಕನಿಷ್ಟ 100 KG ಸಾಮರ್ಥ್ಯ), ಪ್ಲಾಸ್ಟಿಕ್ ಕ್ರೇಟ್ಸ್ (10 ರಿಂದ 20 kg ಸಾಮರ್ಥ್ಯದ ಕನಿಷ್ಟ 100 ಸಂಖ್ಯೆ) ಹಾಗೂ ನೀರಿನ ತೊಟ್ಟಿ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಪ್ರಸ್ತಾವನೆಯಲ್ಲಿ ನಮೂದಿಸುವುದು.

ಪ್ಯಾಕ್ ಹೌಸ್ ನಿರ್ಮಾಣ ವಿವಿಧ ಚಟುವಟಿಕೆ/ಕಾರ್ಯಕ್ರಮಗಳಿಗೆ ತಗಲುವ ಅಂದಾಜು ವೆಚ್ಚದ ವಿವರಗಳು.

(ರೂ. ಲಕ್ಷಗಳಲ್ಲಿ)

| Sl. No. | Components | Estimated Cost |
|---|---|---|
| 1 | Shed with raised cemented floor (9 M x 6m x 3m), roof made of RCC/asbestos/any other suitable durable material, side walls 3mt height. | 3.38 |
| 2 | Supply of water from pack house with storage of water, water tank or sump etc., | 0.20 |
| 3 | Weighing scale (Platform type) capacity. 100 kg. | 0.12 |
| 4 | Plastic crates 100 nos @ Rs. 250/ crates (15-20 kg capacity) | 0.25 |
| 5 | Other miscellaneous | 0.05 |
| | Total | 4.00 |

ಫಲಾನುಭವಿಗಳ ಅರ್ಹತೆ:

1. ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ, ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.
2. ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸಿರನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
3. ಪ್ಯಾಕ್ ಹೌಸ್ ಘಟಕದ ಸಹಾಯಧನ ಪಡೆಯಲು ಉದ್ದೇಶಿಸುವ ಫಲಾನುಭವಿಯು ಬಹುವಾರ್ಷಿಕ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದ ಪಕ್ಷದಲ್ಲಿ ಕನಿಷ್ಟ 2.00 ಹೆ. ಅಥವಾ ತರಕಾರಿ ಹಾಗೂ ಹೂವಿನ ಬೆಳೆಗಳನ್ನು ಬೆಳೆಯುತ್ತಿದ್ದ ಪಕ್ಷದಲ್ಲಿ ಕನಿಷ್ಟ 1.00 ಹೆ. ಜಮೀನು ಹೊಂದಿರಬೇಕು ಅಥವಾ ಸಂರಕ್ಷಿತ ಬೇಸಾಯ ಕಾರ್ಯಕ್ರಮದಡಿ ಹಸಿರುಮನೆ/ನೆರಳು ಪರದೆಯಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದ ಪಕ್ಷದಲ್ಲಿ ಕನಿಷ್ಟ
4. ಫಲಾನುಭವಿಯು ಪ್ಯಾಕ್ ಹೌಸ್ ಘಟಕಕ್ಕೆ ಕೇಂದ್ರ/ರಾಜ್ಯ ಸರ್ಕಾರದ ಇತರೆ ಯಾವುದೇ ಕಾರ್ಯಕ್ರಮದಡಿ ಸಹಾಯಧನ ಪಡೆದುಕೊಂಡಿರುವುದಿಲ್ಲ ಎಂಬ ದೃಢೀಕರಣ ಪತ್ರ ಪಡೆದುಕೊಳ್ಳಬೇಕು.

ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ:-

1. ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗಧಿ ಪಡಿಸಿರುವ ಗುರಿಯ ಮಿತಿಯಲ್ಲಿ ಪ್ರಕಟಣೆಯನ್ನು ಸ್ಥಳೀಯ ಪತ್ರಿಕೆಗಳ ಮುಖಾಂತರವಾಗಿ ಹಾಗೂ ಜಿಲ್ಲೆಯ/ತಾಲ್ಲೂಕು ತೋಟಗಾರಿಕೆ ಕಛೇರಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.
2. ಪ್ರಕಟಣೆಯಲ್ಲಿ ಕಡ್ಡಾಯವಾಗಿ ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗಧಿಪಡಿಸಿದ ಗುರಿ ಮತ್ತು ನಿಗಧಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕರಿಸಿದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಜೇಷ್ಠತಾ ಪಟ್ಟಿಯನುಸಾರ ಪರಿಗಣಿಸುವ ಬಗ್ಗೆ ಸ್ಪಷ್ಟವಾಗಿ ಮಾಹಿತಿ ಇರತಕ್ಕದ್ದು.
3. ಆಸಕ್ತಿಯುಳ್ಳ ರೈತರು ಅರ್ಜಿಯನ್ನು ಮೊದಲಿಗೆ ಈ ಕೆಳಕಂಡ ದಾಖಲಾತಿಗಳೊಂದಿಗೆ ತಾಲ್ಲೂಕು ಹಿಸತೋನಿ/ಸತೋನಿ ಕಛೇರಿಗೆ ಸಲ್ಲಿಸುವುದು.
    a. ನಿಗಧಿತ ನಮೂನೆಯಲ್ಲಿ ಫಲಾನುಭವಿಯ ಭಾವಚಿತ್ರ ಹಾಗೂ ಫಲಾನುಭವಿ ಭರ್ತಿ ಮಾಡಿ ಸಹಿ ಮಾಡಿದ ಅರ್ಜಿ.
    b. ಪಹಣಿ (RTC) ಜನವರಿ-2014 ರ ನಂತರದ್ದಾಗಿರಬೇಕು. (ಬೆಳೆ ಮತ್ತು ವಿಸ್ತೀರ್ಣ ನಮೂದಿಸಿರಬೇಕು)
    c. ತಾಲ್ಲೂಕು ಮಟ್ಟದ ಅಧಿಕಾರಿಗಳು ಅರ್ಜಿಯನ್ನು ಪರಿಶೀಲಿಸಿದ ನಂತರ ಫಲಾನುಭವಿಗಳ ಜೇಷ್ಠತಾ ಪಟ್ಟಿಯನ್ನು ತಯಾರಿಸಿ, ಹಿರಿಯ ಸಹಾಯಕ ತೋಟಗಾರಿಕೆ ಅಧಿಕಾರಿಗಳ ಶಿಫಾರಸ್ಸಿನೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು.
    d. ಜಿಲ್ಲೆಗೆ ನಿಗಧಿಪಡಿಸಿರುವ ಘಟಕ ಮತ್ತು ಆರ್ಥಿಕ ಗುರಿಗಳನ್ನು ಜಿಲ್ಲಾ ಸಮಿತಿ ಅನುಮತಿ/ಗಮನಕ್ಕೆ ತಂದು, ಜಿಲ್ಲಾ ಸಮಿತಿ ಮುಖಾಂತರ ಜೇಷ್ಠತಾ ಪಟ್ಟಿಯನ್ನು ಆಧರಿಸಿ ಫಲಾನುಭವಿಯ ಆಯ್ಕೆ ಮಾಡುವುದು.
4. ತಾಲ್ಲೂಕು ಹಿಸತೋನಿ/ಸತೋನಿ ರವರು ಅರ್ಜಿ ಹಾಗೂ ಮೇಲ್ಕಂಡ ಪ್ಯಾಕ್ ಹೌಸ್/ತಾಕು ಸಂಗ್ರಹಣೆ ಹಾಗೂ ಶೇಖರಣಾ ಘಟಕ ದಾಖಲಾತಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿದಾರರ ಹೆಸರುಗಳನ್ನು ಜೇಷ್ಠತಾ ವಹಿಯಲ್ಲಿ ನಮೂದಿಸಿ 5 ದಿನಗಳ ಒಳಗಾಗಿ ಸಹಾಯಧನ ಅರ್ಜಿಯನ್ನು ತೋಉನಿ (ಜಿಪಂ) ರವರಿಗೆ ಎಲ್ಲಾ ದಾಖಲಾತಿಗಳ ಸಹಿತ ಕಳುಹಿಸುವುದು. ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು ಜಿಲ್ಲೆಯ ಎಲ್ಲಾ ಹಿಸತೋನಿ/ಸತೋನಿ ರವರಿಂದ ಬಂದ ಅರ್ಜಿಗಳನ್ನು ಪರಿಶೀಲಿಸಿ ತಾಲ್ಲೂಕು ವಾರು ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವುದು.
5. ಜಿಲ್ಲೆಯ ತೋಉನಿ (ಜಿಪಂ) ರವರು ಅರ್ಜಿಯನ್ನು ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಅನುಮೋದಿತ ಕ್ರಿಯಾ ಯೋಜನೆ ಮಿತಿಯಲ್ಲಿ ಫಲಾನುಭವಿಗೆ Work Order/letter of intent ನ್ನು 5 ದಿನಗಳೊಳಗಾಗಿ ನೀಡುವುದು.
6. ತೋಉನಿ (ಜಿಪಂ) ರವರಿಂದ Work order/letter of intent ಪಡೆದ ನಂತರ ರೈತರು ಸದರಿ ಯೋಜನೆಯ ಅನುಸಾರ 15 ದಿನಗಳೊಳಗಾಗಿ ತಮ್ಮ ಕ್ಷೇತ್ರದಲ್ಲಿ ಪ್ಯಾಕ್ ಹೌಸ್ ನಿರ್ಮಾಣ ಮಾಡಲು ಕಾರ್ಯ ಪ್ರಾರಂಭಿಸಿ 90 ದಿನಗಳೊಳಗಾಗಿ ಕಾಮಗಾರಿಯನ್ನು ಮುಗಿಸಬೇಕು.

7. ಅರ್ಜಿದಾರರು ಪ್ಯಾಕ್ ಹೌಸ್ ನಿರ್ಮಾಣ ಕಾರ್ಯದ ಹಂತದಲ್ಲಿ ಹಾಗೂ ಪೂರ್ಣಗೊಳಿಸಿದ ನಂತರ ಸಂಬಂಧಿಸಿದ ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಫಲಾನುಭವಿಯೊಂದಿಗೆ ಘಟಕವನ್ನು ಪರಿಶೀಲಿಸಿ ಯೋಜನೆಯ ಅನುಷ್ಠಾನದ ಗುಣಮಟ್ಟ ಹಾಗೂ ಗುಣಮಟ್ಟದ ಸಾಮಗ್ರಿಗಳನ್ನು ಅಳವಡಿಸಿರುವ ಪ್ರಮಾಣ ಕುರಿತಂತೆ ತೃಪ್ತಿಕರವಾಗಿದ್ದಲ್ಲಿ, ಅನುಷ್ಠಾನದ ವಿವರ ಹಾಗೂ ಫಲಾನುಭವಿಗಳ ಸಮೇತ ಛಾಯಾಚಿತ್ರ ಹಾಗೂ ವರದಿಯನ್ನು ಸತೋಅ (RSK) ಹಾಗೂ ಹಿಸತೋನಿ ದೃಢೀಕರಣದೊಂದಿಗೆ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರಿಗೆ ಸಲ್ಲಿಸುವುದು. (5 ದಿನಗಳೊಳಗಾಗಿ).
8. ರೈತರು ಸಲ್ಲಿಸುವ ಪ್ರತಿಯೊಂದು ಸಹಾಯಧನ ಅರ್ಜಿ ಮತ್ತು ಪ್ರಸ್ತಾವನೆಗಳು, ದಾಖಲಾತಿಗಳನ್ನು ನಿಗಧಿತ ದಿನಾಂಕದೊಂದಿಗೆ ಕಡ್ಡಾಯವಾಗಿ ವ್ಯಾಟ್ ಸಂಖ್ಯೆ/ ಮಾರಾಟ ತೆರಿಗೆ ಸಂಖ್ಯೆ ನಮೂದಿಸಿರುವ ಬಿಲ್ ನೊಂದಿಗೆ ಸಲ್ಲಿಸುವುದು.
9. ಪ್ಯಾಕ್ ಹೌಸ್ ಕಟ್ಟಡ ನಿರ್ಮಿಸಲು ಗ್ರಾಮ ಪಂಚಾಯತ್/ಕಂದಾಯ ಇಲಾಖೆಯಿಂದ ಅನುಮತಿ/ಪರವಾನಿಗೆ ಪಡೆಯುವುದು ಆಪೇಕ್ಷಣೀಯ.
10. ಪ್ರಸ್ತಾವನೆಯೊಂದಿಗೆ ಉದ್ದೇಶಿತ ಕಟ್ಟಡದ ನಕ್ಷೆ ಹಾಗೂ ಇದರ ಅಂದಾಜು ವೆಚ್ಚವನ್ನು (Registered) ನೊಂದಾಯಿತ ಇಂಜಿನಿಯರ್ ಅಥವಾ Architect/ಸರ್ಕಾರದ ಯಾವುದೇ ಇಲಾಖೆಯ ಇಂಜಿನಿಯರ್ ರವರಿಂದ ದೃಢೀಕರಣವಾಗಿರಬೇಕು. (Plan & Estimate).
11. ಪ್ರತಿ ಅರ್ಜಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಕಡ್ಡಾಯವಾಗಿ (ಶೇ.100 ರಷ್ಟು) ಘಟಕಗಳ ಪರಿಶೀಲನೆ ನಡೆಸಬೇಕು. ಸತೋಅ (RSK) ರವರು ಪರಿಶೀಲಿಸಿದ ಘಟಕಗಳ ಪೈಕಿ ಕನಿಷ್ಟ ಶೇ.50 ರಷ್ಟು ತಾಕುಗಳನ್ನು ತಾಲ್ಲೂಕು ಸತೋನಿ/ಹಿಸತೋನಿ ರವರು ಪರಿಶೀಲಿಸಬೇಕು. ಸತೋಅ (RSK) ರವರು ನಡೆಸಿರುವ ಪರಿಶೀಲನೆಯಲ್ಲಿ ಯಾವುದಾದರು ನ್ಯೂನತೆಗಳಿದ್ದರೆ ಅರ್ಜಿಯನ್ನು ತಿರಸ್ಕರಿಸುವುದಲ್ಲದೇ ಅವರನ್ನೇ ನೇರ ಜವಾಬ್ದಾರರನ್ನಾಗಿ ಮಾಡವುದು. ಜಿಲ್ಲೆಯ ತೋಉನಿ (ಜಿಪಂ) ರವರು ಶೇ.5 ರಷ್ಟು ಘಟಕಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಸತೋನಿ/ಹಿಸತೋನಿ ರವರು ಪರಿಶೀಲಿಸಿರುವ ಅರ್ಜಿಗಳಲ್ಲಿ ಯಾವುದಾದರೂ ನ್ಯೂನತೆಗಳಿದ್ದರೆ ಸತೋನಿ/ಹಿಸತೋನಿ ರವರನ್ನು ಜವಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವುದು. ಮೇಲಿನ ಎಲ್ಲಾ ಅಧಿಕಾರಿಗಳು ತಮ್ಮ ಸ್ಥಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಛಾಯಾಚಿತ್ರಗಳನ್ನು ತೆಗೆದು ದಾಖಲಿಸುವುದು.
12. ರೈತರು ಬೆಳೆಯನ್ನು ಪಹಣಿಯಲ್ಲಿ ನಮೂದಿಸದೆ ಇರುವ ಪಕ್ಷದಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿ (RSK) ಯಿಂದ ಬೆಳೆಯನ್ನು ದೃಢೀಕರಿಸಿದ ಅರ್ಜಿಗಳನ್ನು ಸಹಾಯಧನ ಲೆಕ್ಕಾಚಾರ ಮಾಡಲು ಪರಗಣಿಸುವುದು.
13. ಪ್ರಸ್ತಾವನೆಯೊಂದಿಗೆ ಸಲ್ಲಿಸುವ ಎಲ್ಲಾ ದಾಖಲಾತಿ ಪತ್ರಗಳಿಗೆ ಆಯಾ ರೈತ ಸಂಪರ್ಕ ಕೇಂದ್ರದ ಸ.ತೋ.ಅ. ಮತ್ತು ತಾಲ್ಲೂಕಿನ ಹಿ.ಸ.ತೋ.ನಿ./ಸ.ತೋ.ನಿ ರವರು ಕಡ್ಡಾಯವಾಗಿ ದಿನಾಂಕದೊಂದಿಗೆ ದೃಢೀಕರಣ ಮಾಡಬೇಕು.

ತಾಂತ್ರಿಕ ಪರಿಶೀಲನಾ ಕ್ರಮಗಳು:

ತಾಕು ಪರಿಶೀಲನೆ ಸಮಯದಲ್ಲಿ ಅನುಷ್ಠಾನಾಧಿಕಾರಿಗಳು ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು.

- ಪ್ರಸ್ತಾವನೆಯೊಂದಿಗೆ ಅಡಿಪಾಯ ಹಾಕಿದ ಸಮಯದಲ್ಲಿ ಹಾಗೂ Lintel ಹಂತಕ್ಕೆ ಬಂದ ಸಮಯದಲ್ಲಿ 4 ದಿಕ್ಕುಗಳಿಂದ ಸಂಪೂರ್ಣ ಕಟ್ಟಡ ಕಾಣುವಂತೆ ಫಲಾನುಭವಿಯೊಂದಿಗೆ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಅಧಿಕಾರಿ/ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಇರುವ ಛಾಯಾಚಿತ್ರಗಳನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸಬೇಕು.
- ರೈತರು ಪ್ಯಾಕ್ ಹೌಸ್ ಘಟಕವನ್ನು ಮಾರ್ಗಸೂಚಿ ಮತ್ತು ಅಂದಾಜು ಪಟ್ಟಿಯಂತೆ ನಿರ್ಮಿಸಿರುವ ಬಗ್ಗೆ ಪರಿಶೀಲಿಸಬೇಕು.
- ಪ್ಯಾಕ್ ಹೌಸ್ ಕಟ್ಟಡವು ಯಾವುದೇ ರೀತಿಯಾಗಿಯೂ ಸಹ ವಾಸಿಸುವ ಮನೆಯಂತೆ ಇರಬಾರದು. ವಾಸಿಸುವ ಮನೆಯಂತೆ ಇರುವ ಪ್ಯಾಕ್ ಹೌಸ್ ಗಳನ್ನು ಸಹಾಯಧನಕ್ಕಾಗಿ ಪರಿಗಣಿಸತಕ್ಕದಲ್ಲ.

ಸಹಾಯಧನ ವಿತರಣೆ:

ಜಿಲ್ಲೆಯ ತೋಉನಿ (ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಹಿಸತೋನಿ ನೀಡಿರುವ ಪ್ಯಾಕ್ ಹೌಸ್/ತಾಕು ಸಂಗ್ರಹಣೆ ಹಾಗೂ ಶೇಖರಣಾ ಘಟಕ ಅನುಷ್ಠಾನದ ವರದಿಯನ್ನು ಪರಿಶೀಲಿಸಿದ ನಂತರ ಕೆಲಸವು ತೃಪ್ತಿಕರವಾಗಿದ್ದಲ್ಲಿ ಮಾತ್ರ ಸಹಾಯಧನದ ಮೊತ್ತವನ್ನು ಈ ಕೆಳಕಂಡ ಯಾವುದಾದರು ಒಂದು ವಿಧಾನದಲ್ಲಿ ಬಿಡುಗಡೆ ಮಾಡುವುದು.

1) ಪ್ಯಾಕ್ ಹೌಸ್ ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಅಧಿಕಾರಿ ಹಾಗೂ ತಾಲ್ಲೂಕು ಅಧಿಕಾರಿಯವರು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿ ಖಚಿತಪಡಿಸಿಕೊಳ್ಳುವುದು ಹಾಗೂ ಪೂರ್ಣಗೊಂಡಿರುವ ಘಟಕದ ಛಾಯಾಚಿತ್ರಗಳನ್ನು ಕಡ್ಡಾಯವಾಗಿ ಪಡೆದುಕೊಂಡ ನಂತರವೇ ಅಂತಿಮವಾಗಿ ಸಹಾಯಧನ ಬಿಡುಗಡೆ ಮಾಡುವುದು.
2) ಫಲಾನುಭವಿಯು ಸಹಾಯಧನ ಪಡೆದಿರುವ ಬಗ್ಗೆ ಪ್ಯಾಕ್ ಹೌಸ್ ಘಟಕದ ಮುಂಭಾಗದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಲೋಗೋ (LOGO) ದೊಂದಿಗೆ ಸಂಕ್ಷಿಪ್ತ ವಿವರಗಳುಳ್ಳ ನಾಮಫಲಕವನ್ನು ಕಡ್ಡಾಯವಾಗಿ ಪ್ಯಾಕ್ ಹೌಸ್ ನ ಘಟಕದ ಗೋಡೆಯ ಮುಂಭಾಗದಲ್ಲಿ ಗೋಡೆ ಬರಹ ಬರೆಸುವುದು (Oil Point).
3) ಫಲಾನುಭವಿಯು ಬ್ಯಾಂಕಿನಿಂದ ಸಾಲ ಪಡೆದಿದ್ದಲ್ಲಿ ಬ್ಯಾಂಕ್ ಸಾಲದ ಜೊತೆಗೆ ಜಮಾ ಆಗುವಂತೆ ಅಥವಾ ಫಲಾನುಭವಿಯ ಉಳಿತಾಯ ಖಾತೆಗೆ ಮಾರ್ಗಸೂಚಿಗಳನ್ನು ಪಾಲಿಸಿ ECS/NEFT ಮುಖಾಂತರ ಸಹಾಯಧನವನ್ನು ಜಮಾ ಮಾಡುವುದು.

ಆರ್ಥಿಕ ಪ್ರತ್ಯಾಯೋಜನೆ (Delegation of Power)

NHM ಯೋಜನೆಯ ಮಾರ್ಗಸೂಚಿಯಂತೆ ರೂ. 2.00 ಲಕ್ಷಗಳವರೆಗೆ ತೋಟಗಾರಿಕೆ ಉಪ ನಿರ್ದೇಶಕರಿಗೆ ತಾಂತ್ರಿಕ ಮತ್ತು ಆಡಳಿತ ಮಂಜೂರಾತಿ ನೀಡಲು ಹಾಗೂ ರೂ. 2.00 ಲಕ್ಷಗಳ ಮೇಲ್ಪಟ್ಟು ತಾಂತ್ರಿಕ ಮತ್ತು ಆಡಳಿತ ಮಂಜೂರಾತಿ ನೀಡಲು ಮಿಷನ್ ನಿರ್ದೇಶಕರಿಗೆ ಅವಕಾಶ ಇರುತ್ತದೆ. ಇದರಂತೆ ಜಿಲ್ಲಾ ಮಟ್ಟದಲ್ಲಿ ಪರಿಶೀಲಿಸಿ, ಕ್ರಮ ವಹಿಸುವುದು.

Reporting and documentation (ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು)

- ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ KSHMA ಮತ್ತು ತೋಟಗಾರಿಕೆ ಉಪ ನಿರ್ದೇಶಕರ ರವರಿಗೆ ಸಲ್ಲಿಸುವುದು.
- ಮುಂದಿನ ಆದೇಶ ಬರುವವರೆಗೂ ಈ ಮಾರ್ಗಸೂಚಿ ಚಾಲ್ತಿಯಲ್ಲಿರುತ್ತದೆ.

ಮಿಷನ್ ನಿರ್ದೇಶಕರು
ಹಾಗೂ
ತೋಟಗಾರಿಕೆ ನಿರ್ದೇಶಕರು

**ಅನುಬಂಧ-1**

**ಸ್ಥಳ ಪರಿಶೀಲನಾ ದೃಢೀಕರಣ-ನಮೂನೆ**

**ಪ್ಯಾಕ್ ಹೌಸ್ ಘಟಕದ ಅಧಿಕಾರಿಗಳ ಸ್ಥಳ ಪರಿಶೀಲನಾ ದೃಢೀಕರಣ ಪತ್ರ**

ದಿನಾಂಕ: ______________ ರಂದು ಶ್ರೀ/ಶ್ರೀಮತಿ ______________________ ತಂದೆ/ಗಂಡ ಶ್ರೀ/ಶ್ರೀಮತಿ _________________ ವಯಸ್ಸು ________, ಗ್ರಾಮ _________, ತಾಲ್ಲೂಕು _____________ ರವರ ಜಮೀನಿನ ಸರ್ವೆ ನಂ: ___________ ನಿರ್ಮಿಸಿರುವ ಪ್ಯಾಕ್ ಹೌಸ್ ಘಟಕಕ್ಕೆ ಭೇಟಿ ನೀಡಿದ್ದು , ಈ ಘಟಕವನ್ನು ಒಟ್ಟು ________ ಚ.ಮೀ. ವಿಸ್ತೀರ್ಣದಲ್ಲಿ ನಿರ್ಮಿಸಿದ್ದು, ಇದರ ಉದ್ದ _________ ಮೀಟರ್, ಅಗಲ ____________ ಮೀಟರ್ ಹಾಗೂ ಎತ್ತರ ____________ ಮೀಟರ್ ಇರುತ್ತದೆ. ಸದರಿ ಘಟಕದಲ್ಲಿ __________ ಟನ್ ಸಾಮರ್ಥ್ಯ ಪ್ಯಾಕ್ ಹೌಸ್ ಘಟಕ ನಿರ್ಮಿಸಿರುತ್ತಾರೆ.

ಈ ಘಟಕವು ಇಲಾಖೆಯಿಂದ ನೀಡಿರುವ ತಾಂತ್ರಿಕ ಮಾನ ದಂಡಗಳಂತೆ ನಿರ್ಮಿಸಲಾಗಿದ್ದು, ವಿವಿಧ ವಸ್ತುಗಳನ್ನು ಗುಣಮಟ್ಟದಂತೆ ಬಳಸಲಾಗಿದೆ ಎಂದು ಖುದ್ದಾಗಿ ಸ್ಥಳ ಪರಿಶೀಲಿಸಿ ದೃಢೀಕರಿಸಲಾಗಿದೆ ಹಾಗೂ ಪರಿಶೀಲನಾ ಸಭೆಯಲ್ಲಿ ಈ ಕೆಳಗಿನ ಕೆಲಸಗಳು ಮುಗಿದಿದ್ದು.

1.
2.
3.

ಈ ಕೆಳಗಿನ ಕೆಲಸಗಳು ಬಾಕಿ ಇದ್ದು

1.
2.
3.

____________ ದಿನಗಳ ಒಳಗಾಗಿ ಪೂರ್ಣಗೊಳಿಸುವುದಾಗಿ ಫಲಾನುಭವಿಯು ತಿಳಿಸಿರುತ್ತಾರೆ.

| | |
|---|---|
| ಸಹಿ: | ಸಹಿ: |
| ಹೆಸರು: __________________ | ಹೆಸರು: __________________ |
| ಸ.ತೋ.ಅ. ________________ | ಹಿ./ಸ.ತೋ.ನಿ (ಜಿ.ಪಂ) |
| ರೈತರ ಸಂಪರ್ಕ ಕೇಂದ್ರ | ________________ತಾಲ್ಲೂಕು |

ಈರುಳ್ಳಿ ಶೇಖರಣಾ ಘಟಕದ ಚೆಕ್ ಲಿಸ್ಟ್:

| | | | |
|---|---|---|---|
| 1 | | ಫಲಾನುಭವಿಯು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆಯೇ? (ಅನುಬಂಧ-5) | ಹೌದು/ಇಲ್ಲ |
| 2 | ಅ)<br>ಆ) | ಫಲಾನುಭವಿಯು ಮಾರ್ಗಸೂಚಿ ಪ್ರಕಾರ ಇರಬೇಕಾದ ಜಮೀನು ಹೊಂದಿರುತ್ತಾರೆಯೇ?<br>ಫಲಾನುಭವಿಯು ತನ್ನ ಹೆಸರಿನಲ್ಲಿರುವ ಪಹಣಿ/ಭೂ ದಾಖಲೆಯನ್ನು ಲಗತ್ತಿಸಿರುವರೇ? | ಹೌದು/ಇಲ್ಲ |
| 3 | | ಫಲಾನುಭವಿಯು ತನ್ನ ಕುಟುಂಬದ ಇತರೆ ಸದಸ್ಯರ ಹೆಸರಿನಲ್ಲಿರುವ ಪಹಣಿ/ಭೂ ದಾಖಲೆ ನೀಡಿದ್ದಲ್ಲಿ ಅಥವಾ ಜಂಟಿ ಖಾತೆ ಇದ್ದಲ್ಲಿ ಕುಟುಂಬದವರ | ಹೌದು/ಇಲ್ಲ |
| 4 | | ಫಲಾನುಭವಿಯೂ ಈರುಳ್ಳಿ ಬೆಳೆಯನ್ನು ಬೆಳೆಯುತ್ತಿರುವ ಬಗ್ಗೆ ಗ್ರಾಮ ಲೆಕ್ಕಾಧಿಕಾರಿಗಳಿಂದ/ಇಲಾಖೆಯ ಅಧಿಕಾರಿಗಳು ನೀಡುವ ಬೆಳೆ ದೃಢೀಕರಣ ಪತ್ರ ಲಗತ್ತಿಸಿರುವರೆ? | ಹೌದು/ಇಲ್ಲ |
| 5 | | ಘಟಕದ ಅಂದಾಜು ಪಟ್ಟಿ ಲಗತ್ತಿಸಿರುತ್ತಾರೆಯೇ?<br>ಅಂದಾಜು ಪಟ್ಟಿಯ ಮೊತ್ತ. | ಹೌದು/ಇಲ್ಲ<br>ರೂ. |
| 6 | | ಘಟಕದ ನಕ್ಷೆ ಲಗತ್ತಿಸಿರುತ್ತಾರೆಯೇ? | ಹೌದು/ಇಲ್ಲ |
| 7 | ಅ)<br>ಆ) | ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಈರುಳ್ಳಿ ಶೇಖರಣಾ ಘಟಕದ ಅಳತೆಯು ಕನಿಷ್ಟ 12x3.6x1.80x2.10 ಮೀ ಇದೆಯೇ?<br>ಇಲ್ಲದೇ ಇದ್ದ ಪಕ್ಷದಲ್ಲಿ ಪ್ರಸ್ತಾವನೆಯಲ್ಲಿ ನೀಡಿರುವ ಘಟಕದ ಅಳತೆಯೇಷ್ಟು? | ಹೌದು/ಇಲ್ಲ |
| 8 | ಅ)<br>ಆ) | ಮಾರ್ಗಸೂಚಿಯ ಪ್ರಕಾರ ಘಟಕದ ಶೇಖರಣಾ ಘಟಕದ ಕನಿಷ್ಟ ಸಾಮರ್ಥ್ಯ 25 ಮೆಟ್ರಿಕ್ ಟನ್ ಇದೆಯೇ?<br>ಇಲ್ಲದೇ ಇದ್ದ ಪಕ್ಷದಲ್ಲಿ ಪ್ರಸ್ತಾವನೆಯಲ್ಲಿ ನೀಡಿರುವ ಘಟಕದ ಶೇಖರಣಾ | ಹೌದು/ಇಲ್ಲ<br>______MT |
| 9 | | ಈರುಳ್ಳಿ ಶೇಖರಣಾ ಘಟಕವೂ ಛಾವಣಿ ಹಂತದಲ್ಲಿರುವ ಛಾಯಾಚಿತ್ರ | ಹೌದು/ಇಲ್ಲ |
| 10 | | ಈರುಳ್ಳಿ ಶೇಖರಣಾ ಗೋದಾಮು ಘಟಕವನ್ನು ಈರುಳ್ಳಿ ಶೇಖರಣೆಯ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳುತ್ತೇನೆಂದು ಹಾಗೂ ಸದರಿ ಘಟಕಕ್ಕೆ ಕೇಂದ್ರ/ ರಾಜ್ಯ ಸರ್ಕಾರದ ಇತರೆ ಯಾವುದೇ ಕಾರ್ಯಕ್ರಮದಡಿ ಸಹಾಯಧನ ಪಡೆದುಕೊಂಡಿರುವುದಿಲ್ಲ ಎಂಬುದನ್ನು ರೂ. 100/- ಛಾಪಾ ಕಾಗದದಲ್ಲಿ ಬರೆದುಕೊಟ್ಟು ಮುಚ್ಚಳಿಕೆ ಪತ್ರವನ್ನು ಲಗತ್ತಿಸಿದ್ದಾರೆಯೇ? | ಹೌದು/ಇಲ್ಲ |
| 11 | | ಘಟಕ ನಿರ್ಮಿಸಲು ಜಿಲ್ಲಾ ಸಮಿತಿಯ ಒಪ್ಪಿಗೆ/ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಅನುಮತಿ/ಅನುಮೋದನೆ ನೀಡಿರುವ ಪತ್ರ ಲಗತ್ತಿಸಿದ್ದಾರೆ? | ಹೌದು/ಇಲ್ಲ |

ಪ್ಯಾಕ್ ಹೌಸ್ ಕರ್ಯಕ್ರಮದ ಚೆಕ್ ಲಿಸ್ಟ್:

| | | |
|---|---|---|
| 1 | ಫಲಾನುಭವಿಯು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆಯೇ ? (ಅನುಬಂಧ-5) | ಹೌದು/ಇಲ್ಲ |
| 2 | ಫಲಾನುಭವಿಯು ಮಾರ್ಗಸೂಚಿಯ ಪ್ರಕಾರ ತನ್ನ ಹೆಸರಿನಲ್ಲಿ ಇರಬೇಕಾದ ಜಮೀನನ್ನು ಹೊಂದಿರುತ್ತಾರೆಯೇ? | ಹೌದು/ಇಲ್ಲ |
| 3 | ಫಲಾನುಭವಿಯು ತನ್ನ ಕುಟುಂಬದ ಇತರೆ ಸದಸ್ಯರ ಹೆಸರಿನಲ್ಲಿರುವ ಪಹಣಿ ನೀಡಿದ್ದಲ್ಲಿ ಅಥವಾ ಜಂಟಿ ಖಾತೆ ಇದ್ದಲ್ಲಿ ಕುಟುಂಬದವರ ಒಪ್ಪಿಗೆ ಪತ್ರ ನೀಡಿರುವರೇ? (ನೋಟರಿ ಕಡ್ಡಾಯವಾಗಿರುತ್ತದೆ) | ಹೌದು/ಇಲ್ಲ |
| 4 | ಫಲಾನುಭವಿಯ ಹಣ್ಣುಗಳು/ಹೂ/ತರಕಾರಿ/ಇತರೆ ಬೆಳೆಗಳನ್ನು ಬೆಳೆಯುತ್ತಿರುವ ಬಗ್ಗೆ ಗ್ರಾಮ ಲೆಕ್ಕಾಧಿಕಾರಿಗಳಿಂದ/ಇಲಾಖೆಯ ಅಧಿಕಾರಿಗಳು ನೀಡಿರುವ ಬೆಳೆ ದೃಢೀಕರಣ ಪತ್ರ | ಹೌದು/ಇಲ್ಲ |

| | | |
|---|---|---|
| | ಲಗತ್ತಿಸಿರುವೆ? | |
| 5 | a) ಘಟಕದ ಅಂದಾಜು ಪಟ್ಟಿ ಲಗತ್ತಿಸಿರುತ್ತಾರೆಯೇ?<br>b) ಅಂದಾಜು ಪಟ್ಟಿಯ ಮೊತ್ತ.<br>c) ಪ್ಯಾಕ್ ಹೌಸ್ ಘಟಕದ ಅವಶ್ಯಕ ಸಾಮಗ್ರಿಗಳಾದ ನೀರಿನ ತೊಟ್ಟಿ ನಿರ್ಮಿಸಲು, ಕ್ರೇಟ್<br>d) ಪ್ಯಾಕ್ ಹೌಸ್ ಘಟಕದ ಅವಶ್ಯಕ ಸಾಮಗ್ರಿಗಳಾದ ನೀರಿನ ತೊಟ್ಟಿ ನಿರ್ಮಿಸಲು, ಕ್ರೇಟ್ಸ್/ಬಕೇಟ್, ತೂಕದ ಯಂತ್ರಗಳನ್ನು ಹೊಂದಿದ್ದಾರೆಯೇ? | ಹೌದು/ಇಲ್ಲ |
| 6 | ಘಟಕದ ನಕ್ಷೆ ಲಗತ್ತಿಸಿರುತ್ತಾರೆಯೇ? | ಹೌದು/ಇಲ್ಲ |
| 7 | ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಪ್ಯಾಕ್ ಹೌಸ್ ಘಟಕದ ಅಳತೆಯ ಕನಿಷ್ಟ 9x6x3 ಮೀ ಇದೆಯೇ? | ಹೌದು/ಇಲ್ಲ |
| 8 | ಪ್ಯಾಕ್ ಹೌಸ್ ಘಟಕವು Lintel ಹಂತದಲ್ಲಿರುವ ಛಾಯಾಚಿತ್ರ ಲಗತ್ತಿಸಿರುತ್ತಾರೆಯೇ? | ಹೌದು/ಇಲ್ಲ |
| 9 | ಪ್ಯಾಕ್ ಹೌಸ್ ಘಟಕವನ್ನು ಪ್ಯಾಕಿಂಗ್ ಹಾಗೂ ಗ್ರೇಡಿಂಗ್ ಉದ್ದೇಶಕ್ಕಾಗಿ ಮಾತ್ರ | ಹೌದು/ಇಲ್ಲ |

| | | |
|---|---|---|
| 1 | ಪ್ಯಾಕ್ ಹೌಸ್ ಘಟಕ ನಿರ್ಮಿಸಲು ಫಲಾನುಭವಿಗೆ ತೋಟಗಾರಿಕೆ ಇಲಾಖೆಯಿಂದ ನೀಡಿರುವ ಅನುಮತಿ ಪತ್ರ ಲಗತ್ತಿಸಿದ್ದಾರೆಯೇ? | |
| 2 | ತಾಲ್ಲೂಕು ಅಧಿಕಾರಿಗಳ ಸ್ಥಳ/ತಾಕು ಪರಿಶೀಲನಾ ವರದಿ ಲಗತ್ತಿಸಿದ್ದಾರೆಯೇ? | |

| | | |
|---|---|---|
| | (ಪರಿಶೀಲನೆ ಮಾಡಿದ ದಿನಾಂಕ, ರೈತರು ಬೆಳೆಯುತ್ತಿರುವ ಬೆಳೆ, ಬೆಳೆಯ ವಿಸ್ತೀರ್ಣ, ಪ್ಯಾಕ್ ಹೌಸ್ ಘಟಕದ ವಿಸ್ತೀರ್ಣ ಹಾಗೂ ಪ್ಯಾಕ್ ಹೌಸ್ ನ ಪೂರಕ ಸೌಕರ್ಯಗಳಾದ ಕ್ರೇಟ್ಸ್, ತೂಕದ ಯಂತ್ರ, ನೀರಿನ ತೊಟ್ಟಿ ಹೊಂದಿರುವ ಬಗ್ಗೆ ಪರಿಶೀಲನಾ ವರದಿ ದೃಢೀಕರಿಸಬೇಕು. | |
| 3 | ಸದರಿ ಘಟಕಕ್ಕೆ ನೀಡಬಹುದಾದ ಸಹಾಯಧನದ ಮೊತ್ತಕ್ಕೆ ತೋಟಗಾರಿಕೆ ಉಪ ನಿರ್ದೇಶಕರ ರವರ ಶಿಫಾರಸ್ಸು ಮಾಡಿರುತ್ತಾರೆಯೇ? | |
| 4 | ಫಲಾನುಭವಿಯು ಪ್ಯಾಕ್ ಹೌಸ್ ಘಟಕದ ನಿರ್ಮಾಣಕ್ಕಾಗಿ ಬ್ಯಾಂಕಿನಿಂದ ಸಾಲ ಪಡೆದಿದ್ದಲ್ಲಿ ಸಾಲ ಮಂಜೂರಾದ ದಿನಾಂಕ, ಮೊತ್ತ, ಬ್ಯಾಂಕ್ ಸಾಲದ ಖಾತೆಯ ಸಂಖ್ಯೆ ವಿವರ ಲಗತ್ತಿಸಿರುವರೇ? | |

ಅಧಿಕಾರಿಯ ಸಹಿ:

ಅಧಿಕಾರಿಯ ಹೆಸರು

ರೈತ ಸಂಪರ್ಕ ಕೇಂದ್ರ, ______

ದಿನಾಂಕ:

ಅಧಿಕಾರಿಯ ಸಹಿ:

ತಾಲ್ಲೂಕು ಅಧಿಕಾರಿಯ ಹೆಸರು:

(ಜಿಪಂ), ______________

ದಿನಾಂಕ:

| | | |
|---|---|---|
| 1 | ಈರುಳ್ಳಿ ಶೇಖರಣೆ ಘಟಕ ನಿರ್ಮಿಸಲು ಫಲಾನುಭವಿಗೆ ತೋಟಗಾರಿಕೆ ಉಪ ನಿರ್ದೇಶಕರು ನೀಡಿರುವ ಅನುಮತಿ ಪತ್ರ ಲಗತ್ತಿಸಿದ್ದಾರೆಯೇ? | |
| 2 | ತಾಲ್ಲೂಕು ಅಧಿಕಾರಿಗಳ ತಾಕು/ಸ್ಥಳ ಪರಿಶೀಲನಾ ವರದಿ ಲಗತ್ತಿಸಿದ್ದಾರೆಯೇ? | |

| | | |
|---|---|---|
| 3 | ಸದರಿ ಘಟಕಕ್ಕೆ ನೀಡಬಹುದಾದ ಸಹಾಯಧನದ ಮೊತ್ತಕ್ಕೆ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆಯೇ? | |
| 4 | ಫಲಾನುಭವಿಯು ಈರುಳ್ಳಿ ಶೇಖರಣಾ ಘಟಕದ ನಿರ್ಮಾಣಕ್ಕಾಗಿ ಬ್ಯಾಂಕಿನಿಂದ ಸಾಲ ಪಡೆದಿದ್ದಲ್ಲಿ ಸಾಲ ಮಂಜೂರಾದ ದಿನಾಂಕ, ಮೊತ್ತ, ಬ್ಯಾಂಕ್ ಸಾಲದ ಖಾತೆಯ ಸಂಖ್ಯೆ ವಿವರ ಲಗತ್ತಿಸಿರುವರೇ? | |

ಅಧಿಕಾರಿಯ ಸಹಿ:

ಅಧಿಕಾರಿಯ ಹೆಸರು

ರೈತ ಸಂಪರ್ಕ ಕೇಂದ್ರ, ______

ದಿನಾಂಕ:

ಅಧಿಕಾರಿಯ ಸಹಿ:

ತಾಲ್ಲೂಕು ಅಧಿಕಾರಿಯ ಹೆಸರು:

(ಜಿಪಂ), ______________

ದಿನಾಂಕ: